ಮದುವೆಯೆಂದರೆ ಎರಡು ಮನಸ್ಸುಗಳ ಮಿಲನ ಮಾತ್ರವಲ್ಲ; ಅದು ಕುಟುಂಬದವರ, ಬಂಧುಗಳ, ಮಿತ್ರರ ಸಮ್ಮಿಲನ. ಸಡಗರ, ಸಂಭ್ರಮ, ವೈಭವದ ಪರಾಕಾಷ್ಠೆ. ಅತಿಥಿಗಳ ಹೊಟ್ಟೆಯನ್ನು ಭೂರಿ ಭೋಜನ ತಣಿಸಿದರೆ, ವಧು– ವರರ ಪೋಷಾಕು, ಧರಿಸಿದ ಒಡವೆಗಳು ಕಣ್ಣನ ತಣಿಸುತ್ತವೆ. ಭಾರತೀಯ ಸಂಪ್ರದಾಯದಲ್ಲಿ ವಿವಾಹವಾದರಂತೂ ಒಡವೆಗಳದ್ದೇ ಒಡ್ಡೋಲಗ. ಅಡಿಯಿಂದ ಮುಡಿಯವರೆಗೆ ತರಹೇವಾರಿ ಆಭರಣಗಳಲ್ಲಿ ವಧು ಮಿಂಚಿದರೆ, ವರ ತಾನೇನೂ ಕಡಿಮೆಯಿಲ್ಲ ಎಂದು ಬೆರಳೆಣಿಕೆಯಲ್ಲಾದರೂ ಹಾಕಿಕೊಂಡು ಝಗಮಗಿಸುತ್ತಾನೆ. ಸಂಪ್ರದಾಯದ ಚೌಕಟ್ಟಿನಿಂದಾಚೆಗೆ ವಿವಾಹವಾಗುವವರೂ ಕೂಡಾ ಕನಿಷ್ಠ ಉಂಗುರವನ್ನಾದರೂ ಧರಿಸದೇ ಇರಲಾರರು.

ಈಗ ಸಾಂಪ್ರದಾಯಕ ಚಿನ್ನದ ಒಡವೆಗಳ ಜೊತೆ ಬೆಳ್ಳಿ, ಪ್ಲಾಟಿನಂ, ವಜ್ರದ ಆಭರಣಗಳು, ಆಧುನಿಕ ವಿನ್ಯಾಸಗಳು ಜೊತೆ ಕೊಟ್ಟರೂ ಒಂದೆರಡು ಆಭರಣಗಳಾದರೂ ಹಳೆಯ ಕಾಲದ ವಿನ್ಯಾಸದವು, ಅಜ್ಜಿಗೆ ಸೇರಿದ್ದು, ಅಮ್ಮನಿಗೆ ತವರು ಮನೆಯಿಂದ ಬಳುವಳಿಯಾಗಿ ಬಂದಿದ್ದು ಎಂದು ಪ್ರಾತಿನಿಧ್ಯ ಇದ್ದೇ ಇರುತ್ತದೆ. ಈ ಜಾಗತೀಕರಣದ ಸಂದರ್ಭದಲ್ಲಿ ಇಟಲಿಯ ವಿನ್ಯಾಸ, ಶ್ರೀಲಂಕಾದ ಸಾಂಪ್ರದಾಯಿಕ ಒಡವೆಗಳು.. ಎಂದೆಲ್ಲಾ ಆಭರಣಗಳ ಮಳಿಗೆಯವರ ಮಾತಿನ ಮೋಡಿಗೆ ಮನಸೋತರೂ ಪ್ರಾದೇಶಿಕತೆ ಎದ್ದು ಕಾಣುತ್ತದೆ.

ಉದಾಹರಣೆಗೆ ಉತ್ತರ ಕನ್ನಡ, ಉತ್ತರ ಕರ್ನಾಟಕದ ಕೆಲವು ಕಡೆ ಮಹಾರಾಷ್ಟ್ರದ ಸಂಪ್ರದಾಯಗಳು ಇನ್ನೂ ಹಾಸುಹೊಕ್ಕಾಗಿವೆ. ವಧುವಿನ ಆಭರಣಗಳನ್ನು ವಿನ್ಯಾಸ ಮಾಡುವಾಗ ಸಾಂಪ್ರದಾಯಕತೆಗೆ ಒತ್ತು ನೀಡಲಾಗುತ್ತದೆ. ಕೈಗಳಿಗೆ ಒಂದು ಜೊತೆ ತೋಡೆ (ದಪ್ಪನೆಯ ಖಡ), ತೆಳ್ಳನೆಯ ವಿವಿಧ ವಿನ್ಯಾಸದಲ್ಲಿ (ಕೊತ್ತಂಬರಿ ಬೀಜ, ಡಬಲ್ ಮೋತಿ, ಕಂಠಿ ಕೆತ್ತನೆ..) ತಯಾರಿಸಿದ ಎರಡು ಜೊತೆ ಬಿಲ್ವಾರದ ಸಂಗಡ ಒಂದು ಜೊತೆ ಪಾಟಲಿ ಇರುತ್ತದೆ. ಕತ್ತಿಗೆ ಮಾವಿನ ಕಾಯಿ ವಿನ್ಯಾಸದ ನೆಕ್ಲೇಸ್, ಉದ್ದನೆಯ ಕಂಠಿಹಾರ, ಕತ್ತಿನ ಬಳಿಯೇ ಬಿಗಿಯುವ ಗೆಜ್ಜೆ ಅಥವಾ ವಜ್ರಟಿಕ್ಕಿ, ಚಪಲ ಹಾರ, ಬೋರ್‌ಮಾಲೆ, ಕಾಸಿನ ಸರ, ದಪ್ಪನೆಯ ಗಟ್ಟಿ ಚಿನ್ನದ ತಂತಿಗೆ ದೊಡ್ಡ ಪದಕವಿರುವ ಕಟ್ಟಾಣಿ, ಮುಂದೆಲೆ ಬೊಟ್ಟು, ತಲೆಗೆ ಚಿನ್ನದ ಗುಲಾಬಿ ಅಥವಾ ಸೇವಂತಿಗೆ ಅಥವಾ ಸಂಪಿಗೆ ಹೂವು, ಕಿವಿಗೆ ಬುಗುಡಿ, ಚಿನ್ನದ ಸರಪಣಿ, ತೋಳಿಗೆ ವಂಕಿ, ತೋಳಬಂದಿ, ಸೊಂಟದ ಪಟ್ಟಿ.. ಹೀಗೆ ಚಿನ್ನಾಭರಣ ವರ್ತಕನ ಅಂಗಡಿಯೇ ವಧುವಿನ ಶರೀರದ ಮೇಲೆ ಕೂತಂತೆ ಕಾಣುತ್ತದೆ. ಸರ್ವಾಲಂಕಾರ ಭೂಷಿತೆಯಾದ ಮಗಳನ್ನು ಧಾರೆ ಎರೆದುಕೊಡುವುದು ಪೋಷಕರಿಗೂ ಹೆಮ್ಮೆಯೇ. ಅವರವರ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ಕೊಡುವುದರಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಬಹುದು ಅಷ್ಟೆ.



ಸಪ್ತಪದಿ ತುಳಿಯುವಾಗ ತಲೆತಲಾಂತರಗಳಿಂದ ಬಂದ ಕಾಸಿನ ಸರ, ಮಾವಿನ ಮಿಡಿ ಸರ, ಮಲ್ಲಿಗೆ ಮೊಗ್ಗಿನ ಸರ, ಕೊತ್ತಂಬರಿ ಸರ, ಅಡ್ಡಿಗೆ ಸರ, ಅವಲಕ್ಕಿ ಸರಗಳನ್ನು ಅಜ್ಜಿಯಂದಿರು ತಮ್ಮ ಮೊಮ್ಮಗಳಿಗೆ ಮದುವೆಯಲ್ಲಿ ಹಾಕಬೇಕು. ಎಂದು ಪ್ರೀತಿಯಿದ ಎತ್ತಿಟ್ಟು ಮದುವೆಯ ದಿನ ತಮ್ಮ ಬೀರುವಿನಿಂದ ಕೊಟ್ಟರೂ ಇಂದಿನ ದಿನಗಳಲ್ಲಿ ಬರುವ ಹೊಸ ವಿನ್ಯಾಸದ ನಗಗಳನ್ನು ತೊಡಬೇಕು, ಶೃಂಗಾರ ಮಾಡಿಕೊಳ್ಳಬೇಕು ಎಂದು ಮದುಮಗಳಿಗೆ ಅನಿಸುವುದು ಸಹಜ.

ಹವಳದ ಸರ, ಮುತ್ತಿನಹಾರ, ಹರಳುಗಳ ನೆಕ್ಲೇಸ್, ಕಲ್ಬರ್ಡ್ ಮುತ್ತಿನ ಹಾರ, ಸಿಂಥೆಟಿಕ್ ಮಣಿಗಳ ಸರ, ಕ್ರಿಸ್ಟಲ್ ಹೊಳಪಿನ ಮಾಲೆ, ಆ್ಯಂಟಿಕ್ ಆಭರಣಗಳು, ಹೆಚ್ಚು ಹೊಳೆಯದ ಮ್ಯಾಟ್ ಫಿನಿಷ್ ಆಭರಣಗಳು, ಪ್ಲಾಟಿನಮ್ಮಿನಂತೆ ಹೊಳಪು ಚಿಮ್ಮಿಸುವ ರೋಡಿಯಂ ಫಿನಿಷ್ ಒಡವೆಗಳು.. ಹೀಗೆ ನೂರಾರು ಶೈಲಿಯ ಆಭರಣಗಳು ಮಾರುಕಟ್ಟೆಯಲ್ಲಿವೆ.

ಹಾಗಂತ ಒಂದರ ಮೇಲೆ ಒಂದು ಹೇರಿಕೊಂಡರೆ ಯಾವುದೂ ಎದ್ದು ಕಾಣದು. ಕುತ್ತಿಗೆ ಭಾರವಾಗಿ ಜೋಲುತ್ತದೆ ಅಷ್ಟೆ. ಬಳೆಗಳೂ ಒಂದರೊಳಗೊಂದು ಸೇರಿಕೊಂಡು ಹಾಕಿಕೊಂಡರೂ ವ್ಯರ್ಥ. ಹಾಗಾದರೆ ಮದುಮಗಳಿಗೆ ಆಭರಣ ಶೃಂಗಾರ ಹೇಗಿರಬೇಕು? ಯಾವ ಆಭರಣಕ್ಕೆ ಯಾವುದು ಹೊಂದಿಕೊಳ್ಳುತ್ತದೆ?

## ಕೊರಳಿನ ಹಾರಗಳು

ಕುತ್ತಿಗೆಗೆ ಕೊರಳಿನ ಹಾರಗಳು ಸರಿಯಾಗಿ ಹೊಂದುವಂತೆ ಒಂದು ನೆಕ್ಲೇಸ್ ಇರಬೇಕು. ಅದರ ಮಧ್ಯಭಾಗ ಅಗಲವಾಗಿದ್ದರೆ ಶೋಭೆ ಹೆಚ್ಚುತ್ತದೆ. ಅದರಿಂದ ಕೆಳಗೆ ಸ್ವಲ್ಪ ಅಂತರದಲ್ಲಿ ಉದ್ದವಾದ ಒಂದು ನೆಕ್ಲೇಸ್. ಆನಂತರ ಒಂದು ಹಾರ. ಅದರ ಕೆಳಗೆ ಇನ್ನೊಂದು ದೊಡ್ಡ ಹಾರ. ಕೊನೆಯಲ್ಲಿ ಗುಂಡುಗಳನ್ನು ಹೊಂದಿದ ಉದ್ದನೆಯ ಕೊತ್ತಂಬರಿ, ನೆಲ್ಲಿಕಾಯಿ, ವಠಾಣಿ ಸರದಂತಹದ್ದನ್ನು ತೊಟ್ಟುಕೊಂಡಾಗ ಒಡವೆಗಳು ಮದುಮಗಳ ಅಂದವನ್ನು ಹೆಚ್ಚಿಸುತ್ತವೆ. ಇದರ ಜೊತೆಗೆ ಮಂಗಳಸೂತ್ರ ಒಪ್ಪವಾಗಿ ಹೊಂದಿಕೊಳ್ಳಲು ಎರಡು ಹಾರಗಳ ಮಧ್ಯೆ ಜಾಗವಿರಲಿ.

## ಕೈ ಬಳೆಗಳು

ಮದುಮಗಳ ಕೈಗಳಿಗೆ ತೊಡಿಸುವ ಆಭರಣಗಳು ಅಷ್ಟೇ ಪ್ರಾಮುಖ್ಯತೆ ಹೊಂದಿವೆ. ಖಡಾ ಬಳೆಯನ್ನು ಪ್ರಾರಂಭದಲ್ಲಿ ತೊಟ್ಟು ಅನಂತರ ಅಗಲವಾದ ಬಳೆ ತೊಡಬೇಕು. ಮಧ್ಯಭಾಗದಲ್ಲಿ ಸಪೂರವಾದ ಬಳೆ, ಗಾಜಿನ ಬಳೆಯನ್ನು ಅಳವಡಿಸಿ ಪುನಃ ಅಗಲದ ಬಳೆ, ಕಲ್ಲಿನ ಬಳೆ, ಮುತ್ತು ಹೊಂದಿರುವ ಬಳೆಯನ್ನು ತೊಡಿಸಬಹುದು. ಆದರೆ ಎರಡೂ ಕೈ ಬಳೆಗಳು ಒಂದಕ್ಕೊಂದು ಹೊಂದಬೇಕು ಅಂದರೆ ಎರಡೂ ಕೈಬಳೆಗಳಲ್ಲಿ ಕೆಲವೊಂದು ಬಳೆಗಳು ಒಂದೇ ರೀತಿಇದ್ದಾಗ ಚಂದ. ಒಳಗಿನ ಭಾಗಗಳಲ್ಲಿ ತರ ತರದ ಬಳೆಗಳನ್ನು ಬಳಸಬಹುದು. ಎನಾಮಲ್ ಪೈಂಟ್ ಹೊಂದಿದ ಬಳೆ, ಆ್ಯಂಟಿಕ್ ಬಳೆಗಳು, ತಿರುಗಣೆ ಬಳೆಗಳು ಎಲ್ಲವನ್ನೂ ಅಗಲವಾದ ಬಳೆಗಳನ್ನು ತೊಟ್ಟರೆ ಕೈಗೆ ಭಾರವಾಗುವ ಸಂಭವ ಹೆಚ್ಚು.

## ಉಂಗುರದ ಜೋಡಣೆ

ಮದುಮಗಳಿಗೆ ಹಾರ, ಕಿವಿಯೋಲೆಗಳ ಸೆಟ್ ಜೊತೆ ಇರುವ ಉಂಗುರಗಳನ್ನು ಮೊದಲು ತೊಡಿಸಿ. ಉಳಿದ ಬೆರಳುಗಳಿಗೆ ಹೂವಿನ ವಿನ್ಯಾಸದ ಉಂಗುರ ತೊಡಿಸಬೇಕು. ಯಾಕೆಂದರೆ ಹಣೆಯಲ್ಲಿ ಮೂಡಿ ಬಂದ ಮುಂಗುರುಳನ್ನು ಕೈ ಬೆರಳುಗಳ ಸಹಾಯದಿಂದ ಹಿಂದೆ ಸರಿಸುವಾಗ ಈ ಉಂಗುರ ಸರಿಯಾಗಿ ಕಾಣಿಸುತ್ತದೆ. ಮದುವೆ ಬಂದ ಅತಿಥಿಗಳ ನೋಟ ಉಂಗುರದ ಮೇಲೆ ಬಿದ್ದು ಮದುಮಗಳಿಗೆ ದೃಷ್ಟಿಯಾಗುವುದನ್ನು ತಡೆಯುತ್ತದೆ. ನಂತರ ಒಂದು ಬೆರಳಿಗೆ 6,8 ಸುತ್ತು ಇರುವ ಮತ್ತು ಪುಟ್ಟ ಚಿತ್ರಣವನ್ನು ಹೊಂದಿದ ಉಂಗುರವನ್ನು ತೊಡಿಸಬಹುದು. ಸಾಧಾರಣ ಈ ವಿನ್ಯಾಸದ ಉಂಗುರ ನಡು ಬೆರಳಿಗೆ ಸೂಕ್ತ. ತೋರು ಬೆರಳ ಒಂದು ಉಂಗುರದಿಂದ ಬಳೆಗೆ ಲಿಂಕ್ ಇರುವ ಚೈನ್ ಹೊಂದಿದ ಆಭರಣವು ಚಂದವಾಗಿರುತ್ತದೆ. ಹೆಬ್ಬೆರಳಿಗೆ ಆದಷ್ಟು ಲೈಟ್ ವೇಟ್ ಉಂಗುರ ಒಳಿತು.